**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಅಭಿವೃದ್ಧಿ ಅಧ್ಯಯನ ವಿಭಾಗ**

ಹಾಗೂ **ಜಗಜೀವನರಾಂ ಸಂಶೋಧನಾ ಸಂಸ್ಥೆ**

**ತಳಸಮುದಾಯಗಳ ಅಧ್ಯಯನ ಕೇಂದ್ರ ರಾಷ್ಟ್ರೀಯ ಕಾನೂನು ಶಾಲೆ, ಭಾರತದ ವಿಶ್ವವಿದ್ಯಾಲಯ, ಬೆಂಗಳೂರು.**

**ಡಾ.ಬಾಬು ಜಗನಜೀವನರಾಂ ಸಂಶೋಧನಾ ಸಂಸ್ಥೆ, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ**

**ಇವರ ಸಹಯೋಗದಲ್ಲಿ**

## ದೇವದಾಸಿ ತಾಯಂದಿರ ಸಮಾಜೋ– ಆರ್ಥಿಕ ಸ್ಥಿತಿಗತಿಗಳ ಮುಕ್ತ ಅವಲೋಕನ ರಾಜ್ಯಮಟ್ಟದ ಕಾರ್ಯಾಗಾರ 7.9.2023

## ದೇವದಾಸಿ ತಾಯಂದಿರ ಮಕ್ಕಳ ಕಲಿಕೆಗೆ ವಿಶೇಷ ಆದ್ಯತೆ : ಡಾ. ಡಿ. ವಿ. ಪರಮಶಿವಮೂರ್ತಿ




ಕನ್ನಡ ವಿಶ್ವವಿದ್ಯಾಲಯವು ಮೂರು ದಶಕಗಳಿಂದ ಸಾಮಾಜಿಕ ಸಮಸ್ಯೆಗಳನ್ನ ಪರಿಹರಿಸುವ ನಿಟ್ಟಿನಲ್ಲಿ ಆನೇಕ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಬಂದಿದೆ. ಇನ್ನೂ ದೇವದಾಸಿ ತಾಯಂದಿರ ಮಕ್ಕಳು ಉನ್ನತ ವ್ಯಾಸಂಗಕ್ಕಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದರೆ ಶೈಕ್ಷಣಿಕ ಮೀಸಲಾತಿಯಲ್ಲಿ ಹೆಚ್ಚಿನ ಆದ್ಯತೆ ನೀಡಿ ಅವರ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಸದಾ ಸಹಕರಿಸಲಾಗುವುದು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ **ಡಾ. ಡಿ.ವಿ. ಪರಮಶಿವಮೂರ್ತಿ** ಅಭಿಪ್ರಾಯಪಟ್ಟರು.



ಕನ್ನಡ ವಿಶ್ವವಿದ್ಯಾಲಯದ **ಮಂಟಪ ಸಭಾಂಗಣದಲ್ಲಿ** ಸಮಾಜ ಕಲ್ಯಾಣ ಇಲಾಖೆ **ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ, ತಳಸಮುದಾಯಗಳ ಅಧ್ಯಯನ ಕೇಂದ್ರ ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ, ಬೆಂಗಳೂರು. ಡಾ. ಬಾಬು ಜಗನಜೀವರಾಂ ಸಂಶೋಧನಾ ಸಂಸ್ಥೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ. ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ** ಸಹಯೋಗದಲ್ಲಿ ಹಮ್ಮಿಕೊಂಡಿದ್ದ **ದೇವದಾಸಿ ತಾಯಂದಿರ ಸಮಾಜೋ– ಆರ್ಥಿಕ ಸ್ಥಿತಿಗತಿಗಳ ಮುಕ್ತ ಅವಲೋಕನ ರಾಜ್ಯ ಮಟ್ಟದ ಕಾರ್ಯಾಗಾರದ** ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಪುರುಷ ಪ್ರಧಾನ ಸಮಾಜದಲ್ಲಿ ಸತಿ ಪದ್ಧತಿ, ದೇವದಾಸಿ ಪದ್ಧತಿಯಿಂದ ಹೆಣ್ಣಿನ ಶೋಷಣೆ ನಡೆಯುತ್ತ ಬಂದಿದೆ. ಆದರೆ ಬ್ರಿಟಿಷರು ಬಂದಮೇಲೆ ಸತಿ ಪದ್ಧತಿ ನಿರ್ಮೂಲನೆಯಾಯಿತಾದರೂ, ಸ್ತ್ರೀಯರ ಆತ್ಮಹತ್ಯೆ ಕೃತ್ಯಗಳು ಇನ್ನೂ

ನಡೆಯುತ್ತಿವೆ. ದೇವದಾಸಿ ಸಮುದಾಯಕ್ಕೆ ಪ್ರಮುಖವಾಗಿ ಶಿಕ್ಷಣ ಮತ್ತು ಆರ್ಥಿಕ ಚೈತನ್ಯಬೇಕಿದೆ. ದೇವದಾಸಿ ತಾಯಂದಿರ ಮಕ್ಕಳು ಉನ್ನತ ಅಧಿಕಾರಿಗಳಾದಾಗ ಮಾತ್ರ ದೇವದಾಸಿ ಪದ್ಧತಿ ನಿರ್ಮೂಲನೆ ಸಾಧ್ಯ. ಲಕ್ಷ್ಮೇಶ್ವರದಲ್ಲಿ ದೊರೆತ ೯೦೦ ವರ್ಷದ ಹಿಂದೆ ದಾಖಲಾದ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಗೌರಲೆ ಎನ್ನುವ ಹೆಣ್ಣು ಮಗಳು ದೇವದಾಸಿಯಾದರು ಸಮಾಜದಲ್ಲಿ ಹೆಚ್ಚು ಪಾವಿತ್ರತೆ ಹೊಂದಿದ ಮಹಿಳೆಯಾಗಿದ್ದಳು. ಆದರೆ ಇಂದು ದೇವದಾಸಿ ಮಹಿಳೆಯರು ಸ್ವಾರ್ಥದ ಕಾರಣದಿಂದಾಗಿ ಶೋಷಣೆಗೆ ಒಳಪಟ್ಟಿದ್ದಾರೆ. ಚಂದ್ರನೆಡೆಗೆ ರಾಕೇಟ್ ಕಳುಹಿಸಿದರು ಸ್ವಸ್ಥ ಸಮಾಜ ನಿರ್ಮಾಣ ಆಗದೇ ಇರುವುದನ್ನ ಇನ್ನಾದರು ಯೋಚಿಸಬೇಕಿದೆ. ಸಾಮಾಜಿಕ ಪರಿವರ್ತನೆಯಾಗುವ ರೀತಿಯ ಕಾರ್ಯಾಗಾರ ಕೈಗೊಂಡಿರುವುದು ಶ್ಲಾಘನೀಯ ಎಂದರು.




ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಮೋಚನಾ ಸಂಸ್ಥೆ, ಅಥಣಿ ಸಂಸ್ಥಾಪಕ ಅಧ್ಯಕ್ಷರಾದ **ಬಿ.ಎಲ್.ಪಾಟೀಲ್ ಅವರು** ಮಾತನಾಡುತ್ತ ದೇವದಾಸಿ ತಾಯಂದಿರಿಗಾಗಿ ಜನಾಂದೋಲವಾದರೂ ಇಂದಿಗೂ ಬದಲಾಗದ ವಾಸ್ತವ ಸ್ಥಿತಿಯಾಗೇ ಉಳಿದಿದೆ. ಜನಸಾಮಾನ್ಯರು ದೇವದಾಸಿ ತಾಯಂದಿರ ಜಾಗದೊಳಗೆ ನಿಂತು ಮಾತಾಡುವ ಸ್ಥಿತಿ ತಲುಪಿದಾಗ ಮಾತ್ರ ಅನಿಷ್ಟ ಪದ್ಧತಿ ತೊಲಗಲಿದೆ. ದೇವದಾಸಿ ಪದ್ಧತಿಯು ಕೇವಲ ಕೆಳವರ್ಗದಲ್ಲಿ ಮಾತ್ರ ಆಚರಣೆಯಲ್ಲಿದ್ದು ಮೇಲ್ವರ್ಗದಲ್ಲಿ ಯಾಕ್ಕಿಲ್ಲ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ 19ರ ದಶಕದಲ್ಲಿ ಮೈಸೂರು ಮಹಾರಾಜರು ಹಾಗೂ ಕೊಲ್ಹಾಪುರದ ಶಾಹು ಮಹಾರಾಜರು ತೆಗೆದುಕೊಂಡ ನಿರ್ಣಯ ಶ್ಲಾಘನೀಯವಾಗಿದೆ. ಆದರೆ ಇಂದಿನ ಸರ್ಕಾರಗಳು ಅನಿಷ್ಟ ಪದ್ಧತಿಗಳ ಸುಧಾರಣೆಗೆ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳದೆ ದೇವದಾಸಿ ತಾಯಂದಿರ ಬೇಡಿಕೆಗಳನ್ನು ಅನುಷ್ಠಾನ ಮಾಡದೆ ನಿರ್ಲಕ್ಷಿಸುತ್ತಿವೆ. ಭಾರತ ದೇಶದ ಹೆಣ್ಣುಮಕ್ಕಳಲ್ಲಿ ಶಿಕ್ಷಣ ಹಾಗೂ ಪ್ರಗತಿಪರ ಚಿಂತನೆಗಳ ಕುರಿತು ಹೆಚ್ಚಿನ ಆಸಕ್ತಿವಹಿಸಿ ಅಂಬೇಡ್ಕರ್‌ರವರ ಆಶಯದಂತೆ ವಿಮೋಚನಾ ರಥವನ್ನ ಮುನ್ನಡೆಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಈ ಕಾರ್ಯಾಗಾರದಲ್ಲಿ ಡಾ ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ನಿರ್ದೇಕರಾದ **ಡಾ.ಸಾಬೀರ್ ಅಹ್ಮದ್ ಮುಲ್ಲಾ ಅವರು** ಆಶಯ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ಅಮ್ಮ ಫೌಂಡೇಶನಿನ ಶೋಭಾ ಗಸ್ತಿ, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ **ಡಾ.ಸಾಹೇಬಾಲಿ ನೀರಗುಡಿ,** ಕಾರ್ಮಿಕ ಅಧ್ಯಯನ ಕೇಂದ್ರ ನಿರ್ದೇಶಕರಾದ **ಪ್ರೊ.ಬಾಬು ಮ್ಯಾಥ್ಯೂ,** ಬಳ್ಳಾರಿ ಹಿರಿಯ ಸಿವಿಲ್ ನ್ಯಾಯಾಧೀಶರು **ಎನ್. ರಾಜೇಶ್ ಹೊಸಮನಿ,** ವಿಜಯನಗರ ಜಿಲ್ಲೆಯ ಡಿಎಮ್‌ಎಫ್‌ನ ಅಧಿಕಾರಿಯಾಗಿರುವ **ಮಂಜುನಾಥ,** ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜಕಲ್ಯಾಣ ಇಲಾಖೆ, ನಿರ್ದೇಕರಾದ **ಡಾ. ಭಾಗ್ಯಲಕ್ಷ್ಮಿ,** ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ **ಡಾ. ಗೀತಮ್ಮ ಕೆ,** ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರ ನಿರ್ದೇಶಕರಾದ **ಪ್ರೊ. ಸೋನಿ ಪೆಲ್ಲಿಪಿರಿ, ವಿವಿಧ ಭಾಗಗಳಿಂದ ಆಗಮಿಸಿದ ದೇವದಾಸಿ ತಾಯಂದಿರು ಮತ್ತು ಮಕ್ಕಳು, ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು** ಮತ್ತು **ವಿದ್ಯಾರ್ಥಿಗಳು** ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಕಾರ್ಯಾಗಾರದ ಸಂಚಾಲಕರಾದ **ಡಾ.ಎಚ್.ಡಿ.ಪ್ರಶಾಂತ್ ಅವರು** ಗಣ್ಯರನ್ನು ಸ್ವಾಗತಿಸಿದರು. ಡಾ. ಬಾಬು ಜಗನಜೀವರಾಂ ಸಂಶೋಧನಾ ಸಂಸ್ಥೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಿರ್ದೇಶಕರಾದ **ಡಾ. ತಿಪ್ಪೇಸ್ವಾಮಿಯವರು** ಕಾರ್ಯಕ್ರಮವನ್ನು ವಂದಿಸಿದರು. ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಸಂಚಾಲಕರಾದ **ಯಮನೂರಪ್ಪ ಹೆಚ್. ಅವರು** ಕಾರ್ಯಕ್ರಮವನ್ನು ನಿರೂಪಿಸಿದರು.



ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ

ತಳಸಮುದಾಯಗಳ ಅಧ್ಯಯನ ಕೇಂದ್ರ

ರಾಷ್ಟ್ರೀಯ ಕಾನೂನು ಶಾಲೆ, ಭಾರತದ ವಿಶ್ವವಿದ್ಯಾಲಯ, ಬೆಂಗಳೂರು

ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ

ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

ಸಂಯುಕ್ತ ಆಶ್ರಯದಲ್ಲಿ

# ದೇವದಾಸಿ ತಾಯಂದಿರ ಸಮಾಜೋ-ಆರ್ಥಿಕ ಸ್ಥಿತಿಗತಿಗಳ ಮುಕ್ತ ಅವಲೋಕನ

## ರಾಜ್ಯಮಟ್ಟದ ಕಾರ್ಯಾಗಾರ

ದಿನಾಂಕ 07-09-2023 ರಂದು ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ಮಂಟಪ ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ – 583 276, ಹೊಸಪೇಟೆ

ಆಹ್ವಾನ ಪತ್ರಿಕೆ

______________________

______________________

**ಪ್ರೊ. ಎಸ್.ಸಿ. ಪಾಟೀಲ**
ಕುಲಸಚಿವರು,
ವಿ.ಶ್ರೀ.ಕೃ.ವಿಶ್ವವಿದ್ಯಾಲಯ, ಬಳ್ಳಾರಿ

**ಡಾ ಸಾಬೀರ್ ಅಹ್ಮದ್ ಮುಲ್ಲಾ**
ನಿರ್ದೇಶಕರು
ಡಾ ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ
ಬೆಂಗಳೂರು

**ಡಾ. ಆರ್ ವಿ ಚಂದ್ರಶೇಖರ್**
ಕಾರ್ಯಾಗಾರದ ಸಂಯೋಜಕರು
ತಳಸಮುದಾಯಗಳ ಅಧ್ಯಯನ ಕೇಂದ್ರ
ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ

**ಡಾ. ಎ.ಸುಬ್ಬಣ್ಣ ರೈ.**
ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ

**ಡಾ. ತಿಪ್ಪೇಸ್ವಾಮಿ ಹೆಚ್.**
ನಿರ್ದೇಶಕರು
ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ
ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ

**ಡಾ. ಗೀತಮ್ಮ ಕೆ.**
ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

## ಉದ್ಘಾಟನಾ ಸಮಾರಂಭ

ದಿನಾಂಕ 07–09–2023 ರಂದು ಬೆಳಿಗ್ಗೆ 10.00 ಗಂಟೆಗೆ

### ಉದ್ಘಾಟನೆ

**ಡಾ. ಇ. ವೆಂಕಟಯ್ಯ, ಭಾ.ಆ.ಸೇ. (ನಿ)**
ಸಲಹೆಗಾರರು, ಎಸ್.ಸಿ.ಎಸ್.ಪಿ & ಟಿ.ಎಸ್.ಪಿ ನೋಡಲ್ ಏಜೆನ್ಸಿ,
ಸಮಾಜ ಕಲ್ಯಾಣ ಇಲಾಖೆ

### ಅಧ್ಯಕ್ಷತೆ

**ಡಾ. ಡಿ. ವಿ. ಪರಮಶಿವಮೂರ್ತಿ**
ಮಾನ್ಯ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

### ಮುಖ್ಯ ಅತಿಥಿಗಳು

**ಶ್ರೀ ಎಚ್. ಆಂಜನೇಯ**
ಮಾಜಿ ಸಚಿವರು, ಸಮಾಜ ಕಲ್ಯಾಣ ಇಲಾಖೆ

**ಡಾ. ಸಾಹೇಬ ಆಲಿ ನಿರಗುಡಿ**
ಮಾನ್ಯ ಕುಲಪತಿಗಳು, ವಿ.ಶ್ರೀ.ಕೃ.ವಿಶ್ವವಿದ್ಯಾಲಯ, ಬಳ್ಳಾರಿ

**ಡಾ. ರಾಕೇಶ್ ಕುಮಾರ್ ಕೆ., ಭಾ.ಆ.ಸೇ.**
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ

**ಶ್ರೀ ಎಮ್.ಎಸ್.ದಿವಾಕರ್ ಭಾ.ಆ.ಸೇ.**
ಜಿಲ್ಲಾದಿಕಾರಿಗಳು, ವಿಜಯನಗರ

**ಶ್ರೀಮತಿ ಪಡೆಯಮ್ಮ ಕ್ಯಾದಗುಪ್ಪ**
ವಿಮುಕ್ತ ದೇವದಾಸಿ ಮಹಿಳಾ ವೇದಿಕೆ

**ಶ್ರೀ ಬಿ.ಎಲ್. ಪಾಟೀಲ್**
ಸಂಸ್ಥಾಪಕ ಅಧ್ಯಕ್ಷರು, ವಿಮೋಚನಾ ಸಂಸ್ಥೆ, ಅಥಣಿ

**ಪ್ರೊ. ಬಾಬು ಮ್ಯಾಥ್ಯೂ**
ನಿರ್ದೇಶಕರು, ಕಾರ್ಮಿಕ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ


**ಡಾ. ಭಾಗ್ಯಲಕ್ಷ್ಮಿ ಎಂ.**
ನಿರ್ದೇಶಕರು, ಸಖಿ ಸಂಸ್ಥೆ, ಹೊಸಪೇಟೆ

**ಡಾ. ಗೀತಮ್ಮ ಕೆ.**
ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

### ಆಶಯ ನುಡಿ

**ಡಾ ಸಾಬೀರ್ ಅಹ್ಮದ್ ಮುಲ್ಲಾ**
ನಿರ್ದೇಶಕರು, ಡಾ ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ,
ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

## ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಇರುವ ದೇವದಾಸಿ ಮಹಿಳೆಯರು




| ಕ್ರ.ಸಂ. | ಜಿಲ್ಲೆ | ಸಂಖ್ಯೆ |
|---|---|---|
| 01 | ಬೆಳಗಾವಿ | 4724 |
| 02 | ಬಿಜಾಪುರ | 4103 |
| 03 | ಬಾಗಲಕೋಟೆ | 7827 |
| 04 | ಕೊಪ್ಪಳ | 6035 |
| 05 | ರಾಯಚೂರು | 3949 |
| 06 | ಧಾರವಾಡ | 763 |
| 07 | ಹಾವೇರಿ | 990 |
| 08 | ಗದಗ | 2900 |
| 09 | ಬಳ್ಳಾರಿ | 9733 |
| 10 | ಗುಲ್ಬರ್ಗ (ಕಲ್ಬುರ್ಗಿ) | 1445 |
| 11 | ಯಾದಗಿರಿ | 1169 |
| 12 | ಚಿತ್ರದುರ್ಗ | 406 |
| 13 | ಶಿವಮೊಗ್ಗ | 024 |
| 14 | ದಾವಣಗೆರೆ | 2592 |
| | ಒಟ್ಟು | 46660 |

ಗೋಷ್ಠಿ–1

## ದೇವದಾಸಿ ತಾಯಂದಿರ & ಮಕ್ಕಳ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಅವಲೋಕನ

ಗೋಷ್ಠಿ–2

## ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಮತ್ತು ಕಾನೂನುಗಳು ಮತ್ತು ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ

## ಸಮಾರೋಪ ಸಮಾರಂಭ

ದಿನಾಂಕ: 07–09–2023 ರಂದು 04:00 ಗಂಟೆಗೆ

### ಸಮಾರೋಪ ಭಾಷಣ

**ಡಾ. ಭಾಗ್ಯಲಕ್ಷ್ಮಿ. ವಿ.**
ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ,
ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

### ಅಧ್ಯಕ್ಷತೆ

**ಡಾ. ಎ.ಸುಬ್ಬಣ್ಣ ರೈ.**
ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

### ಮುಖ್ಯ ಅತಿಥಿಗಳು

**ಪ್ರೊ. ಎಸ್.ಸಿ. ಪಾಟೀಲ**
ಕುಲಸಚಿವರು, ವಿ.ಶ್ರೀ.ಕೃ.ವಿಶ್ವವಿದ್ಯಾಲಯ, ಬಳ್ಳಾರಿ

**ಶ್ರೀಮತಿ ಚಿನ್ನಮ್ಮ**
ಅಧ್ಯಕ್ಷರು, ಜಾಗೃತಿ ಮಹಿಳಾ ಸಂಘಟನೆ, ಪೋತ್ನಾಳ

**ಶ್ರೀಮತಿ ಕೃಷ್ಣಬಾಯಿ**
ಮಹಿಳಾ ಅಭಿವೃದ್ಧಿ ಮತ್ತು ಸೇವಾ ಸಂಸ್ಥೆ, ಚಿಕ್ಕೋಡಿ

**ಡಾ. ಎಚ್.ಡಿ ಪ್ರಶಾಂತ್**
ಕಾರ್ಯಾಗಾರದ ಸಂಚಾಲಕರು
ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

**ಪ್ರೊ. ಸೋನಿ ಪೆಲ್ಲಿಸೆರಿ**
ನಿರ್ದೇಶಕರು, ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರ
ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ,

**ಡಾ ಸಾಬೀರ್ ಅಹ್ಮದ್ ಮುಲ್ಲಾ**
ನಿರ್ದೇಶಕರು, ಡಾ ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ,
ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ
ಬೆಂಗಳೂರು